SC No.26/2022
CW-15 / PW-03

# ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 26/2022

ಚಾ.ಸಾಃ 15 ಪ್ರಾ.ಸಾಃ 03

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 24.12.2025

| | | |
|---|---|---|
| ಸಾಕ್ಷಿಯ ಹೆಸರು | : | ಡಾಃಜಗನ್ನಾಥರೆಡ್ಡಿ |
| ತಂದೆಯ ಹೆಸರು | : | ನಿಂಗರೆಡ್ಡಿ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ತಡಿಬಿಡಿ, ಯಾದಗಿರಿ ಜಿಲ್ಲಾ |
| ವಿಳಾಸ | : | ತಡಿಬಿಡಿ |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಸಮುದಾಯ ಆರೋಗ್ಯ ಕೇಂದ್ರ ವಡಿಗೇರಿಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತಿದ್ದಾಗ ದಿನಾಂಕ 13.07.2021 ರಂದು ಚಾಸಾ-1, 4 ರಿಂದ 7 ರವರು ಹಲ್ಲೆ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ನಾನು ಅವರನ್ನು ಪರೀಕ್ಷಿಸಿರುತ್ತೇನೆ, ಚಿಕಿತ್ಸೆ ಕೊಟ್ಟಿರುತ್ತೇನೆ. ಈ ಬಗ್ಗೆ ಗಾಯದ ಪ್ರಮಾಣ ಪತ್ರಗಳನ್ನು ಕೊಟ್ಟಿರುತ್ತೇನೆ. ಅವುಗಳಲ್ಲಿ ಗಾಯಾಳುಗಳಿಗೆ ಆದ ಗಾಯಗಳನ್ನು ನಮೂದಿಸಿರುತ್ತೇನೆ. ಸದರಿ ಗಾಯಗಳು ಸಾದಸ್ವರೂಪದ ಗಾಯಗಳು ಆಗಿರುತ್ತವೆ.

02. ಸಾಕ್ಷಿಯು ಗುರುತಿಸಿದ ಗಾಯದ ಪ್ರಮಾಣ ಪತ್ರಗಳನ್ನು ಕ್ರಮವಾಗಿ **ನಿಪಿ.4 ರಿಂದ** 8 ಎಂದು, ಸಾಕ್ಷಿಯ ಸಹಿಗಳನ್ನು **ನಿಪಿ.4(ಎ)** ದಿಂದ **ನಿಪಿ.8(ಎ)** ಎಂದು ಗುರುತಿಸಲಾಯಿತು.

03. ಒಬ್ಬ ವ್ಯಕ್ತಿ ಕಾಲಿನಿಂದ ಒದ್ದು ಹಲ್ಲೆ ಮಾಡಿದಾಗ ನಿಪಿ.4 ರಲ್ಲಿ ನಮೂದಿಸಿದ ಗಾಯ ಆಗಬಹುದು.

04. ಒಬ್ಬ ವ್ಯಕ್ತಿಗೆ ಕಲ್ಲು, ಕಟ್ಟಿಗೆಗಳಿಂದ ಹೊಡೆದಾಗ ನಿಪಿ.5 ರಲ್ಲಿ ನಮೂದಿಸಿದ ಗಾಯ ಆಗಬಹುದು.

05. ಒಬ್ಬ ವ್ಯಕ್ತಿಗೆ ಕಟ್ಟಿಗೆಯಿಂದ ಹೊಡೆದಾಗ ನಿಪಿ.6 ರಲ್ಲಿ ನಮೂದಿಸಿದ ಗಾಯ ಆಗಬಹುದು.

06. ಒಬ್ಬ ವ್ಯಕ್ತಿಗೆ ಕಲ್ಲಿನಿಂದ ಮತ್ತು ಕೈಗಳಿಂದ ಹೊಡೆದಾಗ ನಿಪಿ.7, 8 ರಲ್ಲಿ ನಮೂದಿಸಿದ ಗಾಯ ಆಗಬಹುದು.

**ಆರೋಪಿತರ ಪರ ಶ್ರೀ ಎಸ್.ವಾಯ್ ವಕೀಲರಿಂದ ಪಾಟೀ ಸವಾಲುಃ-**

07. ನಾನು ಗಾಯಾಳುಗಳಿಗೆ ಚಿಕಿತ್ಸೆ ಮಾಡುವ ಮೊದಲು ಗಾಯಾಳುಗಳು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರಲಿಲ್ಲ. ನಮ್ಮ ಆಸ್ಪತ್ರೆಯು ವಡಿಗೇರಾ ಪೋಲಿಸ್ ಠಾಣೆಯ ವ್ಯಾಪ್ತಿಯಲ್ಲಿ ಬರುತ್ತದೆ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಬರುತ್ತದೆ. ನಾನು ಈ ಬಗ್ಗೆ ವಡಿಗೇರಾ ಪೋಲಿಸರಿಗೆ ರಾತ್ರಿ 11.00 ಗಂಟೆಗೆ ಲಿಖಿತ ಮಾಹಿತಿ ಕೊಟ್ಟಿದ್ದೇನೆ, ಅದರಲ್ಲಿ ಹಲ್ಲೆಯಾಗಿರುವ ಬಗ್ಗೆ ನಮೂದಿಸಿದ್ದೇನೆ. ಬೇರೆ ಯಾವುದೇ ಪೋಲಿಸರಿಗೆ ಮಾಹಿತಿ ಕೊಟ್ಟಿಲ್ಲ. ಈ ದಿನ ನಾನು ಮೂಲ ಕಡತವನ್ನು ತಂದಿದ್ದೆನೆ. ಪೋಲಿಸರು ನನಗೆ ಯಾವುದೇ ವಸ್ತುಗಳನ್ನು ತೋರಿಸಿಲ್ಲ.

08. ಸಾಕ್ಷಿ ಎಂ.ಎಲ್.ಸಿ ವರದಿಯನ್ನು ತೋರಿಸಲಾಯಿತು. ಸಾಕ್ಷಿಯು ಗುರುತಿಸಿದ ಎಂ.ಎಲ್.ಸಿ ವರದಿಯನ್ನು ಆರೋಪಿತರ ಪರ ವಕೀಲರ ವಿನಂತಿ ಮೇರೆಗೆ **ನಿಡಿ.1** ಎಂದು, ಸಾಕ್ಷಿಯ ಸಹಿಯನ್ನು **ನಿಡಿ.1(ಎ)** ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ ಹಲ್ಲೆ ಆಗಿದೆ ಎಂದು

ನಮೂದು ಮಾಡಿಲ್ಲ ಎನ್ನುವುದು ನಿಜ. ನಿಡಿ.1 ರ ಪತ್ರವನ್ನು ಗಬ್ಬೂರು ಪೋಲಿಸ್ ಠಾಣೆಗೆ ಕಳುಹಿಸಲಾಗಿದೆ ಎನ್ನುವುದು ನಿಜ. ನಿಡಿ.1 ರ ಪತ್ರವನ್ನು ನಾನು ನನ್ನ ಕೈ ಬರಹದಲ್ಲಿ ಬರೆದಿದ್ದೇನೆ. ನಿಡಿ.1 ನ್ನು ಪೋಲಿಸ್ ಠಾಣೆಗೆ ಯಾರ ಮೂಲಕ ಕಳುಹಿಸಿರುತ್ತೇನೆ ನೆನಪಿಲ್ಲ.

09. ನಿಪಿ.4 ರಿಂದ 8 ರ ಗಾಯದ ಪ್ರಮಾಣ ಪತ್ರಗಳಲ್ಲಿ ಗಾಯಾಳುಗಳ ಗುರುತಿನ ಚಿಹ್ನೆಗಳನ್ನು ನಮೂದು ಮಾಡಿಲ್ಲ ಎನ್ನುವುದು ನಿಜ. ವ್ಯಕ್ತಿಯ ಗುರುತಿನ ಚಿಹ್ನೆ ಮೂಲಕ ವ್ಯಕ್ತಿಯನ್ನು ಗುರುತಿಸಲು ಸಾಧ್ಯವಾಗುತ್ತದೆ ಎನ್ನುವುದು ನಿಜ. ಗಾಯಗಳ ವಯಸ್ಸನ್ನು ನಿಪಿ.4 ರಿಂದ 8 ರಲ್ಲಿ ಬರೆದಿಲ್ಲ.

10. ನಿಪಿ.4 ರಲ್ಲಿ ಎಕ್ಸ್-ರೇ ವಿವರಗಳನ್ನು ಅಂದರೆ ನಂಬರ್ ಬರೆದಿಲ್ಲ. ಎಕ್ಸ್-ರೇಯನ್ನು ಗಾಯದ ಪ್ರಮಾಣ ಪತ್ರದೊಂದಿಗೆ ಲಗತ್ತಿಸಿಲ್ಲ.

11. ಚಾಸಾ-1, 4 ರಿಂದ 7 ರವರಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಎನ್ನುವುದು ಸುಳ್ಳು. ಪೋಲಿಸರ ವಿನಂತಿ ಮೇರೆಗೆ ಸುಳ್ಳು ಗಾಯದ ಪ್ರಮಾಣ ಪತ್ರಗಳನ್ನು ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ನಾನು ಸದರಿ ಗಾಯಾಳುಗಳನ್ನು ಪರೀಕ್ಷೆ ಮಾಡಿಲ್ಲ ಎನ್ನುವುದು ಸುಳ್ಳು.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.